3) ದೊರಿಹಳ್ಳಕ್ಕೆ ಹತ್ತಳ್ಳಿ ಹತ್ತಿರ ತಾ: ಇಂಡಿ ಜಿಲ್ಲೆ ಬಿಜಾಪುರ.
4) ವರದಾ ನದಿಗೆ ಕಳಸೂರ ಹತ್ತಿರ ತಾ: ಸವಣೂರ ಜಿಲ್ಲೆ ಧಾರವಾಡ.
5) ಭೀಮಾ ನದಿಗೆ ಕವಳೂರ ಹತ್ತಿರ ತಾ: ಯಾದಗಿರ ಜಲ್ಲೆ : ಗುಲ್ಬರ್ಗಾ.
6) ಕರಂಜಾ ನದಿಗೆ ಆನಂದವಾಡಿ ನೀಡಬಾನ ಹತ್ತಿರ ತಾ: ಬಾಲ್ಕಿ ಜಿಲ್ಲೆ ಬೀದರ್.

ಕ್ರಮಸಂಖ್ಯೆ 1.2.3 ಮತ್ತು 5 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಸವಣೂರ ತಾಲ್ಲೂಕಿನ ಕಳನೂರ ಬ್ಯಾರೇಜ್ ನಿರ್ಮಾಣದ ಅಂದಾಜು ಪಟ್ಟಿಯು ಪರಿಶೀಲನೆಯ ಹಂತದಲ್ಲಿದೆ.

ಕುಣಿಮೆಳ್ಳಿಪಳ್ಳಿ ಬ್ಯಾರೇಜ್ ನಿರ್ಮಾಣದ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿಕೊಡಲಾಗಿದೆ. ಬ್ಯಾರೇಜದ ತಳಪಾಯದ ಕಾಂಕ್ರೆಟ್ ಪೂರ್ಣಗೊಂಡು ಕಂಬಗಳು 1 ಮೀ ಎತ್ತರ ಮುಗಿಯುವ ಹಂತದಲ್ಲಿವೆ. ಕಬ್ಬಿಣದ ಗೇಟುಗಳನ್ನು ಸರಬರಾಜು ಮಾಡಲಾಗಿದೆ. ನಿಗಮಕ್ಕೆ 22.00 ಲಕ್ಷ ರೂ.ಗಳನ್ನು ಪಾರತಿ ಮಾಡಬೇಕಾಗಿದ್ದರಿಂದ ನಿಗಮದವರು ಕೆಲಸ ಸ್ಥಗಿತಗೊಂಡಿದೆ.

ಇ) ಕಳಸೂರ್ ಬ್ಯಾರೇಜ್ ನಿರ್ಮಾಣದ ಅಂದಾಜಿಗೆ ಅನುಮೋದನೆಯಾದ ಮತ್ತು ಹಣಕಾಸಿನ ಲಭ್ಯತೆಗನುಗುಣವಾಗಿ ಈ ಬ್ಯಾರೇಜುಗಳನ್ನು ಪೂರ್ಣಗೊಳಿಸಲಾಗುವುದು.

ಅಕ್ಕೂರ್ ಮೇಲೆ ಉಪಕೇಂದ್ರಕ್ಕೆ 12.5ಎಂ.ವಿ.ಎ. ಟ್ರಾನ್ಸ್ಫಾರಂನ್ನು ಅಳವಡಿಸುವುದರ ಬಗ್ಗೆ

770 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರವು ಕಳೆದ ವಿಧಾನ ಸಭೆಯಲ್ಲಿ ಆ ಅಕ್ಕೂರ್ ಮೇಲೆ ವಿದ್ಯುತ್ ಉಪಕೇಂದ್ರವನ್ನು ಮಾರ್ಚಿ 94ರಲ್ಲಿ ಪಾಲನೆ ಮಾಡಲಾಗುವುದು ಎಂದು ಆಶ್ವಾಸನೆ ಕೊಟ್ಟಿರುವುದು ನಿಜವೇ?*

ಆ) *ಹಾಗಿದ್ದಲ್ಲಿ, ಈ ಉಪಕೇಂದ್ರವನ್ನು ಚಾಲನೆಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?*

ಇ) *ಇದುವರೆಗೂ ಅಕ್ಕೂರ್ ಮೇಲೆ ಉಪಕೇಂದ್ರಕ್ಕೆ 12.5 ಎಂವಿಎ ಟ್ರಾನ್ಸ್ಫಾರ್ಮರ್ಗಳನ್ನು ಅಳವಡಿಸಲು ಕಳುಹಿಸದಿರುವುದು ನಿಜವೇ?*

ಈ) *ಹಾಗಿದ್ದಲ್ಲಿ, ಈ ಟ್ರಾನ್ಸ್ಫಾರ್ಮರ್ಗಳನ್ನು ಅಕ್ಕೂರ್ ಮೇಲೆಗೆ ಕಳುಹಿಸದಿರಲು ಕಾರಣವೇನು?*

ಉ) *ಈ ಉಪಕೇಂದ್ರವನ್ನು ಚಾಲನೆಗೊಳಿಸುವ ನಿಗದಿಯಾದ ದಿನಾಂಕವನ್ನು ತಿಳಿಸುವುದು.*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮಂಡಳಿಯು ಮಾರ್ಚ್ 94ರಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲು ಆದಷ್ಟು ಪ್ರಯತ್ನ ಮಾಡುತ್ತಿದೆ. ಆದರೆ ದಾರಿ ನಿರ್ಮಾಣದಿಂದ ಟ್ರಾನ್ಸ್ಮಿಷನ್ ಲೈನ್ ತೆಗೆದುಕೊಂಡು ಹೋಗಲು ಸ್ವಲ್ಪ ಅಡಚಣೆಯಾಗುತ್ತಿದೆ.

ಆ) ಈ ಸಮಸ್ಯೆಯನ್ನು ಬಗೆಹರಿಸಲು ಮಂಡಳಿಯು ರೈತರೊಡನೆ ಮಾತುಕತೆ ನಡೆಸಿ ಆದಷ್ಟು ಪ್ರಯತ್ನ ಮಾಡುತ್ತಿದೆ.

ಇ) ಅಕ್ಕೂರ್ ಮೇಲೆ ಉಪ ಕೇಂದ್ರಕ್ಕೆ 12.5 ಎಂವಿಎ ಟ್ರಾನ್ಸ್ಫಾರ್ಮರ್ [illegible] 6.3 ಎಂವಿಎ ಟ್ರಾನ್ಸ್ ಫಾರ್ಮರ್ ಸಾಕಾಗುತ್ತದೆ.

ಏಪ್ರಿಲ್94ರಲ್ಲಿ 6.3 ಎಂವಿಎ ಟ್ರಾನ್ಸ್ಫಾರ್ಮರ್ಗಳು ಬರುವ ನಿರೀಕ್ಷೆ ಇದೆ. ಸರಬರಾಜಿನಿಂದ ಬಂದ ತಕ್ಷಣ ಒಂದು 6.3 ಎಂವಿಎ ಪವರ್ ಟ್ರಾನ್ಸ್ಫಾರ್ಮರ್ನ್ನು ಅಕ್ಕೂರ್ ಮೇಲೆಗೆ ಕಳುಹಿಸಲಾಗುವುದು.

ಈ) 'ಇ' ಭಾಗದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) ಟ್ರಾನ್ಸ್ಮಿಷನ್ ಲೈನ್ ಕೆಲಸ ಮಾಡಲು ದಾರಿ ಸುಗಮವಾದ ತಕ್ಷಣವೇ ಈ ಉಪಕೇಂದ್ರವನ್ನು ಚಾಲನೆಗೊಳಿಸಲಾಗುವುದು.

ಚಿಕ್ಕಮಗಳೂರು ಬಳಿ ಕಣ್ವಾ ನದಿಗೆ ಅಡ್ಡಲಾಗಿ ವೆಂಟೆಡ್ ಡ್ಯಾಂ ನಿರ್ಮಿಸುವುದರ ಬಗ್ಗೆ

769 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಬಳಿ ಕಣ್ವಾ ನದಿಗೆ ಅಡ್ಡಲಾಗಿ ವೆಂಟೆಡ ಡ್ಯಾಂ ನಿರ್ಮಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ 1994-95ನೇ ಸಾಲಿನ ಪಾಲಿ ಆಯವ್ಯಯದಲ್ಲಿ ಸೇರಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿ ಉಳಿದಿಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.

ಕೃಷ್ಣ ಡೆವಲಪ್ಮೆಂಟ್ ಅಥಾರಿಟಿ ಬಿಲ್ಲನ್ನು ಅನುಷ್ಠಾನ ಮಾಡುವ ಬಗ್ಗೆ

651 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ವಿಧಾನ ಸಭೆಯಲ್ಲಿ ಯಾವಾಗ ಅಂಗೀಕರಿಸಲಾಯಿತು;

ಆ) ಅದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಗೆಗೆ ಯಾವಾಗ ಕಳುಹಿಸಲಾಯಿತು;

ಇ) ಇಲ್ಲಿಯವರೆಗೆ ಆ ವಿಧೇಯಕವನ್ನು ಅನುಷ್ಠಾನ ಮಾಡುವಲ್ಲಿ ವಿಳಂಬ ಆಗಿರುವುದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ದಿನಾಂಕ 30-3-92 ರಂದು ಅಂಗೀಕರಿಸಲಾಯಿತು.

ಆ) ದಿನಾಂಕ 11-5-92 ರಂದು ಕಳುಹಿಸಲಾಯಿತು.

ಇ) ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ ಕೆರೆ ನಿರ್ಮಾಣ ಕುರಿತು

737 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ 2000 ಸಾಲಿನೊಳಗಾಗಿ ಕೆರೆ ನಿರ್ಮಾಣವಾಗುತ್ತದೆಂದು ಆ ಕೆರೆ ಒಳಗೆ ಕುರುಕುಂಟಾ, ಹೈಯಾಳ್ ಇತ್ಯಾದಿ ಗ್ರಾಮಗಳ ಭೂಮಿ ಮುಳುಗಡೆಯಾಗುತ್ತದೆಂದು ಪಿತ ನೀರಾವರಿಗಾಗಿ ಅನುಮತಿ ನೀಡಲಾರದ್ದು, ನಿಜವೇ?